# ಅನುವಾದಿತ ಕತೆ

ನಾಣ್ಯಗಳು ಯಾವುದೂ ಕಳುವಾಗಲಿಲ್ಲ ಎಂದರೆ ನೀವು ನಂಬಬೇಕು.

ಯಾವಾಗ ಘೇಂಡಾಮೃಗದಿಂದ ನಾಣ್ಯಗಳನ್ನು ಕದಿಯಲು ತೋಚಿತೆಂದರೆ ಒಮ್ಮೆ – ಮೊದಮೊದಲು – ಅಣ್ಣನ ಬಲವಂತಕ್ಕೆ ಆಕೆ ಹುಂಡಿಯನ್ನು ತೆರೆದು ಸ್ವಲ್ಪ ನಾಣ್ಯಗಳನ್ನು ತೆಗೆದುಕೊಟ್ಟಾಗಲೇ. ಘೇಂಡಾಮೃಗದಿಂದ ನಾಣ್ಯಗಳನ್ನು ತೆಗೆದುಕೊಳ್ಳುವುದು ಅಪರಾಧವಲ್ಲವೆಂದು ನನಗೆ ಅನಿಸಿ, ಆದ್ದರಿಂದ ನಾನು ನಾಣ್ಯಗಳನ್ನು ಕದಿಯಲು ಪ್ರಾರಂಭಿಸಿದೆ. ಅದರಲ್ಲಿ ತುಂಬ ನಾಣ್ಯಗಳಿದ್ದದ್ದರಿಂದ ಅತ್ತಿಗೆಯಿಂದ ಈ ಕಳ್ಳತನವನ್ನು ಪತ್ತೆ ಮಾಡಲಾಗಲಿಲ್ಲ. ಅಲ್ಲದೇ ಅದರಲ್ಲಿ ಹೆಚ್ಚಾಗಿ ನಾಣ್ಯಗಳು ಸೇರಲು ಸಾಧ್ಯವಾಗುತ್ತಿತ್ತು. ನಾನು ಕದಿಯುವುದು ಇಬ್ಬರಿಗೆ ಮಾತ್ರವೇ ತಿಳಿದ ಗುಟ್ಟಾಗಿತ್ತು. ಒಂದು ನನಗೆ, ಮತ್ತೊಂದು ಘೇಂಡಾಮೃಗಕ್ಕೆ.

ಇಲ್ಲಿಯವರೆಗೆ ಒಂದು ರೂಪಾಯಿ ನಾಣ್ಯಗಳನ್ನು ಶೇಖರಿಸುತ್ತಿದ್ದ ನಾನು ಖರ್ಚುಮಾಡಲು ತೊಡಗಿದೆ. ಕೆಲವು ಸಮಯ ಅತ್ತಿಗೆಯನ್ನು ನಂಬಿಸಲು ಅದನ್ನೇ ಹಿಂತಿರುಗಿಸಿ ಕೊಟ್ಟೆ. ಅದನ್ನು ಅವಳು ಹುಂಡಿಗೆ ಹಾಕುವಾಗ ಘೇಂಡಾಮೃಗ ಗುಟ್ಟಾಗಿ ನಗುತ್ತಿರುವುದೆಂದು ನನಗೆ ಗೊತ್ತಾಗುತ್ತಿತ್ತು.

ಈ ಕಳ್ಳತನ ನನ್ನ ಜಗತ್ತನ್ನು ಲವಲವಕೆಯಿಂದಲೂ ಗುಟ್ಟಾಗೂ ಇಟ್ಟಿತು. ಪಿತೂರಿ ಮಾಡುವವರಿಂದಲೂ ಮಾಟಮಾಡುವವರಿಂದಲೂ ತುಂಬಿದ ಜಗತ್ತಿನಲ್ಲಿ ನಾನು ಪಯಣಿಸುತ್ತಿದ್ದೆ. ಒಂಟಿಯಾಗಿ ಇರುವುದಾಗಿಯೂ ಸಹ ಅಂದುಕೊಂಡೆ. ಈಗ ಘೇಂಡಾಮೃಗ ಅತ್ತಿಗೆಗೆ ಮಾತ್ರ ಸ್ವಂತವಲ್ಲ. ಗುಟ್ಟಾಗಿ ನನಗೂ ಸೇರಿದ್ದೇ. ಒಳಉಡುಪುಗಳ ಮಧ್ಯೆ ಅಡಗಿಸಿಟ್ಟ ಅದನ್ನು ನನ್ನಿಂದಲೂ ತೆಗೆದುಕೊಳ್ಳಲು ಸಾಧ್ಯ.

